## ತುಂಗಾ ಮೇಲ್ದಂಡೆ ಯೋಜನೆ

೪೭. ಶ್ರೀ ಬಿ.ಜಿ. ಬಣಕಾರ್ (ಹಿರೇಕರೂರ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳ ಈ ಕೆಳಗೆಕಂಡ ಪ್ರಶ್ನೆಗಳನ್ನು ಉತ್ತರಿಸುವರೆ ?

ಅ) ತುಂಗಾ ಮೇಲ್ದಂಡೆಯ ಗಾಜನೂರ ಯೋಜನೆಯ ಅಂದಾಜು ವೆಚ್ಚವೆಷ್ಟು ?

ಆ) ಈ ಯೋಜನೆಯ ಲಾಭ ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಎಕರೆ ಆಗುತ್ತಿದೆ ?

ಇ) ಈ ಯೋಜನೆಯನ್ನು ಆದಷ್ಟು ಬೇಗ ಕಾರ್ಯಗತ ಮಾಡಲಾಗುವುದೇ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಪೂರ್ವಭಾವಿ ವರದಿಯಂತೆ ೧೯೮೦–೮೧ನೆಯ ಸಾಲಿನ ದರಗಳ ಸೂಚಿಯ ಪ್ರಕಾರ ಸುಮಾರು ೧೩,೭೧೦ ಲಕ್ಷರೂಪಾಯಿಗಳು.

| | | | |
|---|---|---|---|
| ಆ) ಶಿವಮೊಗ್ಗ ತಾಲ್ಲೂಕು | ... | ೫,೮೮೪ | ಎಕರೆಗಳು |
| ಹೊನ್ನಾಳಿ ,, | ... | ೧೭,೪೩೭ | ,, |
| ಹಿರೇಕೆರೂರು .. | ... | ೩೩.೩೦೧ | ,, |
| ರಾಣೇಬೆನ್ನೂರು ,, | ... | ೮೮,೩೩೬ | ,, |
| ಹಾವೇರಿ .. | ... | ೮೫.೦೪೨ | ,, |
| ಹಾನಗಲ್ ,, | ... | ೪,೦೦೦ | ,, |
| ಒಟ್ಟು | ... | ೨,೩೪,೦೦೦ | ,, |

ಇ) ವಿವರವಾದ ಯೋಜನಾವರದಿ ಸಿದ್ಧವಾದ ನಂತರ, ಆಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಡಿ. ಜಿ. ಬಸವನಗೌಡ.—ಆ ಯೋಜನೆಯನ್ನು ತಯಾರಿಸಲು ಎಷ್ಟು ವರ್ಷ ಆಗಬಹುದು . ಈ ಪ್ರಶ್ನೆ ಕಳೆದ ೨೫ ವರ್ಷಗಳಿಂದ ಇದ್ದರೂ ಇನ್ನೂ ಬಗೆಹರೆದಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ಈ ಒಂದು ಯೋಜನೆಯಿಂದ ಇಂಥಿಂಥ ತಾಲ್ಲೂಕುಗಳಲ್ಲಿ ಇಷ್ಟಿಷ್ಟು ಎಕರೆ ಪ್ರದೇಶಗಳಿಗೆ ನೀರನ್ನು ಒದಗಿಸಬಹುದೆಂದು ಈಗಿರತಕ್ಕ ಒಂದು ಲೈನ್ ಎಸ್ಟಿಮೇಟ್ ಪ್ರಕಾರ ಅಧಿಕಾರಿಗಳು ತಿಳಿಸಿದ್ದಾರೆ. ಇದರಲ್ಲಿರತಕ್ಕ ಕೆಲವು ಸಮಸ್ಯೆಗಳನ್ನು ತಮ್ಮ ಗಮನಕ್ಕೆ ತರಲೆಚ್ಚಿಪಡುತ್ತೇನೆ. ತಮಗೆ ಗೊತ್ತಿರುವ ಹಾಗೆ ೧೯೭೭ರಲ್ಲಿ ಕೃಷ್ಣವಾರ್ಡ್ ಆಯಿತು. ಅದರಲ್ಲಿ ನಾವು ಉಪಯೋಗಿಸುವುದಕ್ಕೆ ಅವಕಾಶ ಇರುವುದು ೭೩ ಟಿ.ಎಂ.ಸಿ. ಈಗಿರತಕ್ಕ ತುಂಗ ಆಣೆಕಟ್ಟಿನಿಂದ ೮ ಟಿ.ಎಂ.ಸಿ. ಗಿಂತ ಹೆಚ್ಚು ಉಪಯೋಗ ಮಾಡಿಕೊಳ್ಳಬಹುದೆಂದು ಅಧಿಕಾರಿಗಳು ಅಭಿಪ್ರಾಯ ಪಟ್ಟಿದ್ದಾರೆ. ಸರಂಗ್ರೆ ಯೋಜನೆ ಆದಮೇಲೆ ಕೃಷ್ಣ ವಾಲಿ ಅಥಾರಿಟಿ ಸ್ಟಾರ್ಟ್ ಮಾಡಿದ ಮೇಲೆ ಸುಮಾರು ೩೪ ಟಿ ಎಂ.ಸಿ. ಉಪಯೋಗ ಮಾಡಿಕೊಳ್ಳಬಹುದೆಂದು ಇದೆ. ಇದನ್ನು ಮಾಡಬೇಕಾದರೆ ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರ ಸರ್ಕಾರಗಳ ಒಡಂಬಡಿಕೆ ಅಂತಿಮವಾಗಿ ಆಗಬೇಕಾಗಿದೆ. ಅದನ್ನು ಮಾಡುವುದಕ್ಕೆ ನಮಗೆ ಬಿಟ್ಟುಕೊಟ್ಟಿದ್ದಾರೆ. ಅದನ್ನು ಮಾಡಿಕೊಂಡರೆ ೧೦೫೦ ಟಿ.ಎಂ.ಸಿ. ನೀರು ದೊರಕಂವುದಕ್ಕೆ ಸಾಧ್ಯತೆ ಇದೆ. ಇದಾದಮೇಲೆ ೩೪ ಟಿ.ಎಂ.ಸಿ. ಉಪಯೋಗ ಮಾಡಿಕೊಳ್ಳಬಹುದು. ಜೊತೆಗೆ ತುಂಗ ಆಣೆಕಟ್ಟೆಯನ್ನು ಎತ್ತರ ಮಾಡಿ ಚಾನಲ್ ಮಾಡಿ ತೆಗೆದುಕೊಂಡು ಹೋಗತಕ್ಕದ್ದು ಇದೆ. ಇದು ಸೂಕ್ಷ್ಮವಾಗಿ ತಯಾರಿಸಿರತಕ್ಕ ಲೈನ್ ಎಸ್ಟಿಮೇಟ್. ಇದರ ಬಗ್ಗೆ ಸಮಗ್ರ ತನಿಖೆ ಆಗಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ, ಒಂದು ಕಡೆ ಕೃಷ್ಣವಾಲಿ ಅಥಾರಿಟಿ ಮಾಡುವುದರ ಬಗ್ಗೆ ಸಂಬಂಧಪಟ್ಟ ರಾಜ್ಯಗಳ ಜೊತೆ ಒತ್ತಾಯ ಮಾಡುತ್ತೇವೆ. ಮತ್ತೊಂದು ಕಡೆ ಇದಕ್ಕೆ ಸರಿಯಾದ ಎಲ್ಲ ವಿವರಗಳನ್ನು ಸಂಗ್ರಹ ಮಾಡುವ ಸಲುವಾಗಿ ಸರ್ಕಾರ ಪ್ರತ್ಯೇಕ ಡಿವಿಜನ್ ಅನ್ನುನೇಮಕ ಮಾಡಿ ಮಾಡಿಸುತ್ತೇವೆ. ಪ್ಲಾನ್ ಮತ್ತು ಎಸ್ಟಿಮೇಟನ್ನು ತಯಾರಿಸುವುದಕ್ಕೆ ಕೂಡ ಒಂದು ಡಿವಿಜನ್ ಅನ್ನು ನೇಮಿಸಿ ಆ ಕೆಲಸವನ್ನು ಸಹ ಮಾಡಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್.—ಅಪ್ಪರ್ ಭದ್ರ ಯೋಜನೆ ಕೂಡ ಸರ್ಕಾರದ ಮುಂದಿದೆ. ಅಪ್ಪರ್ ತುಂಗಾ ಯೋಜನೆಯಿಂದ ಅಪ್ಪರ್ ಭದ್ರ ಯೋಜನೆಗೆ ಏನಾದರೂ ತೊಂದರೆಯಾಗತಕ್ಕ ಪರಿಸ್ಥಿತಿ ಇದೆಯೇ ? ಆ ಬಗ್ಗೆ ಸರ್ಕಾರ ಏನಾದರೂ ಯೋಚನೆ ಮಾಡಿದೆಯೇ ?

ಶ್ರೀ ಎಚ್.ಡಿ. ದೇವೇಗೌಡ.—ಅದರ ಬಗ್ಗೆ ವಿವರಣೆ ನನ್ನ ಮುಂದೆ ಈಗ ಇಲ್ಲ. ಉತ್ತರ ಕೊಡುವಾಗ ಸಭೆಗೆ ಸರಿಯಾದ ಮಾಹಿತಿಯನ್ನು ಒದಗಿಸಬೇಕಾಗುತ್ತದೆ. ಅದಕ್ಕೆ ಎಷ್ಟು ನೀರನ್ನು ಅಲೊಟ್ ಮಾಡಿದ್ದಾರೆಂಬುದನ್ನು ನೋಡಬೇಕಾಗುತ್ತದೆ. ಈ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಬಸವನಗೌಡ.—ತುಂಗಾ ಅಣೆಕಟ್ಟು ಎತ್ತರ ಮಾಡುವುದು ಆಯಿತು. ಅದೇ ನದಿಗೆ ಲಿಫ್ಟ್ ಇರಿಗೇಷನ್ ಮಾಡಿ ಹೊನ್ನಾಳಿ ಮತ್ತು ಹಿರೇಕೆರೂರ್ ತಾಲ್ಲೂಕಿಗೆ ನೀರಾವರಿ ಮಾಡುವ ಬಗ್ಗೆ ಸ್ಕೀಮ್, ಅಂದಾಜು, ನಕ್ಷೆ ತಯಾರಾಗಿದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ.

ಶ್ರೀ ಎಚ್.ಡಿ. ದೇವೇಗೌಡ.—ಮೂರು ಲಿಫ್ಟ್ ಇರಿಗೇಷನ್ ಮಾಡಬೇಕು ಎಂಬ ಅಭಿಪ್ರಾಯ ಸರ್ಕಾರಕ್ಕಿದೆ. ಅದಕ್ಕಿಂತ ಅಪ್ಪರ್ ತುಂಗಾದಲ್ಲಿ ಫ್ಲೋ ಇರಿಗೇಷನ್ ಮಾಡುವುದು ಸಾಧುವಾದುದು ಅದರಿಂದ ಹಣ ಕೂಡ ಕಡಿಮೆ ಖರ್ಚಾಗುತ್ತದೆ ಎಂಬ ಅಭಿಪ್ರಾಯವೂ ಇದೆ. ಇದಿನ್ನೂ ಇನ್‌ವೆಸ್ಟಿಗೇಷನ್ ಹಂತದಲ್ಲಿಯೇ ಹೊರತು ನಿಖರವಾಗಿ ಏನೂ ಹೇಳುವುದಕ್ಕಾಗುವುದಿಲ್ಲ. ಗಾಜನೂರು ಬಳಿ ಏತ ನೀರಾವರಿ, ಅದೇ ರೀತಿ ಬೈರನಾಪಾದದ ಬಳಿ ತುಂಗಭದ್ರಕ್ಕೆ ಒಂದು ಏತ ನೀರಾವರಿ ಮತ್ತು ಸಿಂಗತಾಲೂರಿನ ಬಳಿ ಒಂದು ಏತ ನೀರಾವರಿ. ಹೀಗೆ ಮೂರು ಏತ ನೀರಾವರಿ ಯೋಜನೆಗಳನ್ನು ಮಾಡಬಹುದೆಂಬ ಅಭಿಪ್ರಾಯ ಇದೆ. ಆದರೆ ಅಧಿಕಾರಿಗಳು ಪ್ರಥಮ ನೋಟಕ್ಕೆ ಒಂದುವರದಿ ಏನು ಕೊಟ್ಟಿದ್ದಾರೆಂದರೆ ಇದು ಕಾಸ್ಟ್ ಸ್ವಲ್ಪ ಹೆಚ್ಚಾಗಬಹುದು, ಅದರ ಬದಲಾಗಿ ಅಪ್ಪರ್ ತುಂಗಾ ಮಾಡುವುದಕ್ಕೆ ಸಾಧ್ಯವಾಗಬಹುದು ಎಂಬ ಅಭಿಪ್ರಾಯ ಕೊಟ್ಟಿದ್ದಾರೆ. ಸರ್ಕಾರ ಈ ಬಗ್ಗೆ ಎಲ್ಲಾ ಗಮನ ಹರಿಸುತ್ತದೆ. ಸುಮ್ಮನೆ ಹಾರಿಕೆ ಉತ್ತರ ಕೊಡಬೇಕಾದ ಆವಶ್ಯಕತೆ ಇಲ್ಲ. ರಾಜ್ಯದಲ್ಲಿರುವ ಎಲ್ಲ ಜಲಸಂಪತ್ತನ್ನು ಉಪಯೋಗ ಮಾಡುವುದಕ್ಕೆ ವಿಶೇಷ ಆಸಕ್ತಿ ಕೊಡುತ್ತೇವೆ ಇದಕ್ಕೆ ಡಿವಿಷನ್ ಕೂಡ ನೇಮಕ ಮಾಡಿ ಸರಿಯಾಗಿ ತನಿಖೆ ನಡೆಸಿ ಫೈನಾನ್ಷಿಯಲ್ ಫೀಸಿಬಿಲಿಟಿ ಟೆಕ್ನಿಕಲ್ ಫೀಸಿಬಿಲಿಟಿ ನೋಡಿ, ಮುಂಬುಗಡೆ ಎಷ್ಟಾಗುತ್ತದೆ ಎಂಬುದನ್ನು ನೋಡಿ ಎಲ್ಲ ವಿವರವಾದ ವರದಿಯನ್ನು ತರಿಸಿಕೊಂಡು ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಶ್ರೀ ಬಿ.ಜಿ. ಬಣಕಾರ್.—ಈ ಯೋಜನೆಯನ್ನು ತಯಾರು ಮಾಡುವಲ್ಲಿ ಯಾವುದೇ ತೊಂದರೆಯಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಯೋಜನೆಯನ್ನು ಎಷ್ಟು ಅವಧಿಯಲ್ಲಿ ತಯಾರು ಮಾಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಎಚ್.ಡಿ. ದೇವೇಗೌಡ.—ಇದರಲ್ಲಿರತಕ್ಕ ತೊಡಕುಗಳನ್ನು ನಾನು ಹೇಳಿದ್ದೇನೆ. ೧೯೭೭ರ ಟ್ರಿಬ್ಯುನಲ್ ಅವಾರ್ಡ್ ಪ್ರಕಾರ ಕೇವಲ ೮ ಟಿ ಎಂ.ಸಿ. ನೀರನ್ನು ಮಾತ್ರ ಉಪಯೋಗ ಮಾಡುವುದಕ್ಕೆ ಸಾಧ್ಯವಿದೆ. ಆ ಯೋಜನೆಯನ್ನು ಮಾಡುವುದರಿಂದ ಫಲ ದೊರೆಯುವುದಿಲ್ಲ, ಆದ್ದರಿಂದ ಕೃಷ್ಣ ವ್ಯಾಲಿ ಅಥಾರಿಟಿ ಮಾಡಿಕೊಳ್ಳುವುದಕ್ಕೆ ಬೇರೆ ರಾಜ್ಯದೊಡನೆ ಸಮಾಲೋಚನೆ ಮಾಡಿ ಅವರ ಸಮ್ಮತಿ ತೆಗೆದುಕೊಂಡು ಕ್ರಮ ತೆಗೆದುಕೊಂಡರೆ ೩೪ ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿ, ೨,೩೪,೦೦೦ ಎಕರೆ ಜಾಗಕ್ಕೆ ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೃಷ್ಣ ವ್ಯಾಲಿಗೆ ಸಂಬಂಧಪಟ್ಟ ನೀರನ್ನು ಕರ್ನಾಟಕ ರಾಜ್ಯ ಎಷ್ಟು ಉಪಯೋಗಿಸಿಕೊಳ್ಳಬೇಕು ಎಂಬ ಪ್ರಶ್ನೆ ಇರುವುದರಿಂದ ಅದಕ್ಕೆ ಹೊಂದಿಕೊಂಡಂತೆ ತುಂಗ ನದಿಯಿಂದ ಎಂತಹ ಭದ್ರ ನದಿಯಿಂದ ಎಷ್ಟು ನೀರನ್ನು ಉಪಯೋಗಿಸಿಕೊಳ್ಳಬೇಕು ಎಂಬ ಪ್ರಶ್ನೆಯೂ ಇದೆ. ಸರ್ಕಾರ ಈ ಬಗ್ಗೆ ವಿವರ ಕೊಡಬೇಕಾದ ಅಗತ್ಯವಿಲ್ಲ. ಭದ್ರ ನದಿಯಿಂದ ಎಷ್ಟು ನೀರನ್ನು ಉಪಯೋಗಿಸಿಕೊಳ್ಳಬಹುದು, ತುಂಗಾ ನದಿಯಿಂದ ಎಷ್ಟು ಉಪಯೋಗಿಸಿಕೊಳ್ಳಬಹುದು ಎಂಬುದನ್ನು ಗಮನದಲ್ಲಿಟ್ಟುಕೊಂಡು ಈ ಸಮಸ್ಯೆಯನ್ನು ಬಗೆಹರಿಸತಕ್ಕ ತೀರ್ಮಾನ ತೆಗೆದುಕೊಳ್ಳುತ್ತೀರಾ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಮೊದಲೇ ಹೇಳಿದ್ದೇನೆ, ಭದ್ರ ಮೇಲ್ದಂಡೆ ಯೋಜನೆ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಪ್ರತ್ಯೇಕ ಪ್ರಶ್ನೆ ಕೇಳಿದರೆ ಇದಕ್ಕೆ ಉತ್ತರ ಕೊಡುತ್ತೇನೆ. ಕೃಷ್ಣ ಅವಾರ್ಡ್‌ನಿಂದ ಬರತಕ್ಕ ನೀರನ್ನು ಹಂಚಿಕೆ ಮಾಡುವಾಗ ಯಾವ ಯಾವ ಯೋಜನೆಯಿಂದ ಎಷ್ಟೆಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಬೇಕು ಎಂಬ ಬಗ್ಗೆ ಪಟ್ಟಿಯನ್ನು ಸರ್ಕಾರ ಸಿದ್ಧ ಮಾಡಿದೆ. ಭದ್ರ ಮೇಲ್ದಂಡೆ ಯೋಜನೆಯಿಂದ ಎಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಬೇಕು ಎಂಬ ವಿವರಣೆ ನನ್ನ ಹತ್ತಿರ ಈಗಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಈಗಾಗಲೇ ಅರಿಕೆ ಮಾಡಿಕೊಂಡ ಹಾಗೆ ವಿವರಣೆ ಬೇಕಾಗಿಲ್ಲ. ತುಂಗ ಮತ್ತು ಭದ್ರ ನದಿಗಳು ಉಪನದಿಗಳು. ಈ ಎರಡೂ ನದಿಗಳ ನೀರನ್ನು ಉಪಯೋಗ ಮಾಡುವ ಸಂದರ್ಭ ಇದೆ. ಆದ್ದರಿಂದ ನಮ್ಮ ರಾಜ್ಯಕ್ಕೆ ಅಲೋಕೇಟ್ ಆಗಿರತಕ್ಕ ನೀರಿನಲ್ಲಿ ತುಂಗ ನದಿಯಿಂದ ಎಷ್ಟು ನೀರನ್ನು ಉಪಯೋಗಿಸಿಕೊಳ್ಳಬೇಕು, ಭದ್ರ ನದಿಯಿಂದ ಎಷ್ಟು ಉಪಯೋಗಿಸಿಕೊಳ್ಳಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ಯೋಜನೆಯನ್ನು ಸಿದ್ಧ ಮಾಡಬೇಕು ಎಂದು ನನ್ನ ಅರಿಕೆ.

ಶ್ರೀ ಎಚ್ ಡಿ. ದೇವೇಗೌಡ.—ಈಗತಾನೆ ಅಧಿಕಾರಿಗಳು ಇನ್‌ಫರ್ಮೇಷನ್ ಕಳಿಸಿದ್ದಾರೆ. ೭೩೪ ಟಿ ಎಂ.ಸಿ. ನೀರನ್ನು ಉಪಯೋಗ ಮಾಡಿಕೊಳ್ಳತಕ್ಕ ಪ್ರಥಮ ಹಂತದಲ್ಲಿ ಅಪ್ಪರ್ ಭದ್ರಾಗೆ ೧೪ ಟಿ.ಎಂ.ಸಿ. ನೀರನ್ನು ಇಟ್ಟಿದ್ದಾರೆ, ಅಪ್ಪರ್ ತುಂಗಾಗೆ ೮ ಟಿ.ಎಂ.ಸಿ. ನೀರನ್ನು ಇಟ್ಟಿದ್ದಾರೆ. ಅದೇ ರೀತಿ ಕೃಷ್ಣ ವ್ಯಾಲಿ ಅಥಾರಿಟಿ ಸ್ಥಾಪನೆ ಮಾಡಿದ ನಂತರ ಸಿಗುವ ೧೦೫೦ ಟಿ.ಎಂ.ಸಿ. ನೀರಿನ ಷೇರೇನಿದೆ ಅದರ ಪ್ರಕಾರ ಅಪ್ಪರ್ ಭದ್ರಾಗೆ ೨೦ ಟಿ.ಎಂ.ಸಿ. ಅಪ್ಪರ್ ತುಂಗಾಗೆ ೩೭ ಟಿ.ಎಂ.ಸಿ. ನೀರನ್ನು ಇಟ್ಟಿದ್ದಾರೆ.

ಶ್ರೀ ಕೆ. ಮಲ್ಲಪ್ಪ.—ಅಪ್ಪರ್ ಭದ್ರಾ ಮಾಡುವುದರಿಂದ ಹಾಲಿ ಅಚ್ಚುಕಟ್ಟುದಾರರಿಗೆ ಸೇರಿರತಕ್ಕ ೮ ತಾಲ್ಲೂಕುಗಳಿಗೆ ನೀರಿನ ತೊಂದರೆಯಾಗುತ್ತದೆಂಬ ಭೀತಿ ರೈತರಲ್ಲಿ ಬಂದಿದೆ. ಒಂದು ವೇಳೆ ಈ ಕಾರ್ಯ ತ್ವರಿತಗತಿಯಲ್ಲಿ ಆದರೆ ರೈತರ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಡಿ. ದೇವೇಗೌಡ.—ಹಾಲಿ ಇರತಕ್ಕ ಯಾವುದೇ ಯೋಜನೆಗಳಿಗೆ ಆತಂಕವಾಗದಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿ. ಅದರ ಬಗ್ಗೆ ತಾವು ಕಾಳಜಿ ವಹಿಸಬೇಕಾಗಿಲ್ಲ. ಹೊಸ ಯೋಜನೆಗಳನ್ನು ಮಾಡುವಾಗ ಹಾಲಿ ಇರತಕ್ಕ ಯೋಜನೆಗಳಿಗೆ ಅಪಾಯವಾಗದಂತೆ ನೋಡಿಕೊಳ್ಳುವ ಆಶ್ವಾಸನೆ ಕೊಡುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ಜನ ಪ್ರತಿನಿಧಿಗಳನ್ನು ವಿಚಾರ ಮಾಡದೆ ಆಕಸ್ಮಾತ್ ಮುಂದುವರೆದರೆ ವಿಕೋಪಕ್ಕೆ ಪರಿಸ್ಥಿತಿ ಹೋಗಬಹುದು ಎಂದು ನನಗನ್ನಿಸುತ್ತದೆ. ಇದನ್ನು ತಾವು ಗಮನದಲ್ಲಿಟ್ಟು ಕೊಳ್ಳಬೇಕು.

ಶ್ರೀ ಕೆ ಎಚ್. ರಂಗನಾಥ್.—ವೇದಾ ಕೂಡ ಕೃಷ್ಣ ವ್ಯಾಲಿಯಲ್ಲಿ ಬರುತ್ತದೆ. ವೇದಾದಲ್ಲಿ ಒಂದು ಟಿ ಎಂ.ಸಿ. ನೀರು ಕೂಡ ಬಳಸಬಾರದು ಎಂದು ಅವಾರ್ಡ್‌ನಲ್ಲಿದೆ. ಇದರಲ್ಲಿ ಒಟ್ಟು ವಿಷಯಗಳು ಸೇರಿರುವುದರಿಂದ ಮಾನ್ಯ ಹುಚ್ಚಮಾಸ್ತಿಗೌಡರು ಹೇಳಿದಹಾಗೆ ಅಪ್ಪರ್ ಭದ್ರ ಮತ್ತು ಅಪ್ಪರ್ ತುಂಗ ಮತ್ತೇನಾದರೂ ಮಾಡುವಾಗ ಸಮಗ್ರವಾಗಿ ಎಲ್ಲವನ್ನೂ ಯೋಚನೆ ಮಾಡಿ ಮಾಡ ಬೇಕಾಗುತ್ತದೆ. ಯಾರೋ ಒಬ್ಬ ಸದಸ್ಯರು ಹೇಳಿದರು ಎಂದು ಮಾಡುವ ಹವ್ಯಾಸ ಬಿಟ್ಟು ಸಮಗ್ರವಾಗಿ ಯೋಚನೆ ಮಾಡಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿದೆ. ಕೃಷ್ಣ ಯೋಜನೆ ಬಗ್ಗೆ ಪುನರ್‌ವಿಮರ್ಶೆ ಮಾಡುವ ಪ್ರಯತ್ನ ಆಯಿತು. ಆದರ ಫಲವಾಗಿ ಅವಾರ್ಡ್ ಬಂದು ಹೆಚ್ಚು ನೀರು ದೊರೆತಿದೆ ಈ ಕಷ್ಟ ಎಲ್ಲ ಅನುಭವಿಸಿದ್ದೇವೆ. ಈ ಹಿನ್ನೆಲೆಯಲ್ಲಿ ಬರೀ ಅಧಿಕಾರಿಗಳು ಹೇಳುವ ಮಾತಿಗೆ ಅವಲಂಬನೆಯಾಗದೆ ಸಮಗ್ರವಾಗಿ ಯೋಚನೆ ಮಾಡಿ ತುಂಗಾ ಮೇಲ್ದಂಡೆ, ಮತ್ತು ವೇದಾ ವ್ಯಾಲಿಯಲ್ಲಿ ನೀರನ್ನು ಬಳಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು.

ಈಗಾಗಲೇ ಆಂಧ್ರಕ್ಕೆ ಹೆಚ್ಚು ಪ್ರಯೋಜನ ಆಗಿದೆ. ಇನ್ನೂ ನಷ್ಟ ಮಾಡಿಕೊಳ್ಳುವುದರಲ್ಲಿ ಬುದ್ಧಿವಂತಿಕೆ ಇಲ್ಲ. ನಮ್ಮಲ್ಲಿರತಕ್ಕ ಪ್ರತಿ ಹನಿ ನೀರನ್ನೂ ಬಳಸಿಕೊಳ್ಳಬೇಕಾಗುತ್ತದೆ. ರಾಯಲಸೀಮೆ ಬಾರ್ಡರ್‌ನಲ್ಲಿರತಕ್ಕ ತಾಲ್ಲೂಕುಗಳಿಗೆ ನೀರನ್ನು ಒದಗಿಸತಕ್ಕದ್ದು ನಮ್ಮ ಆದ್ಯ ಕರ್ತವ್ಯ. ಈ ದೃಷ್ಟಿಯಿಂದ ಪುನರ್ವಿಮರ್ಶೆ ಮಾಡಿ ಸಮಗ್ರ ಯೋಜನೆಯನ್ನು ಮುಂದಿಟ್ಟುಕೊಂಡು ತೀರ್ಮಾನ ತೆಗೆದುಕೊಳ್ಳುವ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

ಶ್ರೀ ಎಚ್ ಡಿ. ದೇವೇಗೌಡ.—ಸ್ವಾಮಿ, ಈಗಾಗಲೇ ಕೃಷ್ಣ ಬೇಸಿನ್‌ನಲ್ಲಿ ಕೆಲವು ಯೋಜನೆಗಳನ್ನು ಕಾರ್ಯಗತ ಮಾಡಲು ತೆಗೆದುಕೊಂಡಿದ್ದು ಅದು ಕಾರ್ಯಗತವಾಗಬೇಕಿದೆ. ಇನ್ನು ಕೆಲವು ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ನಕ್ಷೆ ತಯಾರಾಗಿಲ್ಲ. ಎಸ್ಟಿಮೇಟ್ ಮತ್ತು ಪ್ಲಾನ್ ತಯಾರಾಗಿಲ್ಲ. ಯಾರೋ ಒಬ್ಬರು ವ್ಯಕ್ತಿಗಳು ಹೇಳತಕ್ಕ ಪ್ರಶ್ನೆಗಿಂತ ಹೆಚ್ಚಾಗಿ ನಮ್ಮ ಜಲ ಸಂಪತ್ತನ್ನು ಉಪಯೋಗ ಮಾಡಿಕೊಳ್ಳಬೇಕಾದರೂ ರಾಜ್ಯ ಸರ್ಕಾರದ ಕರ್ತವ್ಯ ಇದು ಯಾರೋ ಒಬ್ಬ ಸದಸ್ಯರನ್ನು ಮೆಚ್ಚುಗೆ ಮಾಡತಕ್ಕ ಪ್ರಶ್ನೆಯಲ್ಲ. ಎಷ್ಟು ನೀರು ಸಿಗುತ್ತದೋ ಅದರ ಪೂರ್ಣ ಬಳಕೆ ಮಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ ಪ್ರತ್ಯೇಕ ಡಿವಿಷನ್‌ಗೆ ಮಂಜೂರಾತಿ ಕೊಟ್ಟು ತಪಾಸಣೆ ಮಾಡಿಸುವ ಇರಾದೆ ಸರ್ಕಾರಕ್ಕಿದೆ ಎಂಬ ವಿಷಯವನ್ನು ಈಗಾಗಲೇ ನಾನು ತಿಳಿಸಿದ್ದೇನೆ. ಉಳಿದ ನೀರನ್ನು ಹಂಚಿಕೊಳ್ಳುವಾಗ ಯಾವ ಯಾವ ಭಾಗಕ್ಕೆ ಎಷ್ಟೆಷ್ಟು ನೀರು ವೀಸಲಾತಿ ಇಡಬೇಕು ಎಂಬ ಬಗ್ಗೆ ಟ್ರಿಬ್ಯುನಲ್ ಅವಾರ್ಡ್‌ನ ಷರತ್ತಿಗೆ ಅನುಗುಣವಾಗಿ ಮಾಡಬೇಕಾಗುತ್ತದೆ. ಅದರಲ್ಲಿ ಏನೇನು ಕಂಡೀಷನ್‌ಗಳನ್ನು ಒಳಪಡಿಸಿದ್ದಾರೋ ಅದಕ್ಕಿಂತ ಮುಂದೆ ನಾವು ಹೋಗುವುದಕ್ಕಾಗುವುದಿಲ್ಲ. ಅದನ್ನು ಗಮನದಲ್ಲಿಟ್ಟುಕೊಂಡು, ಮಾನ್ಯ ಸದಸ್ಯರು ಹೇಳಿದ ವಿಷಯಗಳನ್ನೂ ಗಮನಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್. ನಾಗನಗೌಡ.—ಒಳಿಳಿ ಟಿ.ಎಂ.ಸಿ. ಕೆ.ಜಿ. ಅವಾರ್ಡ್‌ನಲ್ಲಿ ಆಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ನಾನು ತುಂಗಭದ್ರ ಜಲಾಶಯ ಆಯಕಟ್ಟಿನಿಂದ ಬಂದಿರತಕ್ಕ ಶಾಸಕ. ತುಂಗಭದ್ರ ಕಮ್ಯಾಂಡ್ ಏರಿಯಾ ಸದಸ್ಯನಾಗಿಯೂ ನಾಲ್ಕು ವರ್ಷ ಕೆಲಸ ಮಾಡಿದ್ದೇನೆ. ಬಳ್ಳಾರಿ ತಾಲ್ಲೂಕಿನಲ್ಲಿ ಕೃಷ್ಣ ಟ್ರಿಬ್ಯುನಲ್ ಅವಾರ್ಡಿನಲ್ಲಿ ೧೭.೫ ಟಿ.ಎಂ.ಸಿ. ಕೊಟ್ಟಿದ್ದಾರೆ. ಅಲ್ಲಿ ಕೆಲವು ಕಡೆ ನೀರಿದ್ದರೂ ಅದಕ್ಕೆ ಭೂಮಿ ಇಲ್ಲ. ಮುಖ್ಯ ಇಂಜಿನಿಯರ್ ಅವರನ್ನು ಭೇಟಿ ಮಾಡಿ ಕೇಳಿದಾಗ ಸರ್ವೆ ಮಾಡುವುದಕ್ಕೆ ಹೇಳಿದ್ದೇವೆ ಎಂದು ಹೇಳಿದರು. ಬಳ್ಳಾರಿ ತುಂಗಭದ್ರಾ ಕಡಪ ಕರ್ನೂಲ್ ಇವೆಲ್ಲಾ ಮೊದಲು ರಾಯಲಸೀಮೆಯಲ್ಲಿನ ಹಿಂದುಳಿದ ಪ್ರದೇಶಗಳು. ಆದೇ ರೀತಿಯಾಗಿ ೭-೮ ವರ್ಷದಿಂದ ಬರಗಾಲ ಇರತಕ್ಕ ಬಳ್ಳಾರಿ ತಾಲ್ಲೂಕಿನಲ್ಲಿ ನೀರಿನ ಆವಶ್ಯಕತೆ ಹೆಚ್ಚಾಗಿದೆ. ಆದ್ದರಿಂದ ಅಲ್ಲಿ ನೀರನ್ನು ಪಂಪ್‌ಔಟ್ ಮಾಡಿಕೊಡುವುದಕ್ಕೆ ಸಾಧ್ಯವಿದೆಯೆ ಎಂದು ಕೇಳುತ್ತೇನೆ. ಮೊನ್ನೆ ರೈಲು ಉದ್ಘಾಟನೆ ಮಾಡುವ ಸಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿಗಳು, ಆಂಧ್ರದ ಮುಖ್ಯಮಂತ್ರಿಗಳು ಹಾಗೂ ನಮ್ಮ ಹಿಂದಿನ ಮುಖ್ಯಮಂತ್ರಿಗಳು ಸೇರಿದ್ದರು. ಆಗ ಮಳೆಗಾಲದಲ್ಲಿ ತುಂಗಭದ್ರಾದಲ್ಲಿನ ೨೦೦ ಟಿ.ಎಂ.ಸಿ. ನೀರು ಪೋಲಾಗುತ್ತಿದೆಯೆಂದು ತಿಳಿದುಬಂತು ಈ ನೀರನ್ನು ಯಾವ ರೀತಿ ಉಪಯೋಗಿಸಿಕೊಳ್ಳಬೇಕು ಎಂಬ ಬಗ್ಗೆ ಎರಡೂ ಸರ್ಕಾರಗಳು ಆಲೋಚನೆ ಮಾಡುವುದಕ್ಕೆ ಸಾಧ್ಯವಿದೆ. ಬಳ್ಳಾರಿ ಜನರಿಗೆ ನೀರಿಗೆ ಬಹಳ ತೊಂದರೆ ಇದೆ. ಇಂತಹ ಪರಿಸ್ಥಿತಿಯಲ್ಲಿ ನೀರನ್ನು ಪಂಪ್ ಮಾಡಿ ವಿತರಣೆ ಮಾಡುತ್ತೀರಾ ? ಪೋಲಾಗುತ್ತಿರುವ ನೀರನ್ನು ಸದುಪಯೋಗಪಡಿಸಿಕೊಳ್ಳುವ ಬಗ್ಗೆ ೨ ಸರ್ಕಾರಗಳು ಆಲೋಚನೆ ಮಾಡಿ ಹೆಚ್ಚಿನ ತಾಲ್ಲೂಕುಗಳಿಗೆ ಇದನ್ನು ಉಪಯೋಗ ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರೇ, ೨ ರಾಜ್ಯಗಳವರು ಕುಳಿತು ತೀರ್ಮಾನ ತೆಗೆದುಕೊಳ್ಳುವ ವಿಷಯವೆಂದು ಹೇಳಿದ್ದಾರೆ. ಈ ವಿಷಯದ ಬಗ್ಗೆ ಅಂತಿಮ ನಿರ್ಣಯವನ್ನು ಈಗಲೇ ಹೇಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರು ಹೇಳಿದ್ದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಇದರ ಬಗ್ಗೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಡುತ್ತದೆ.